

# ಒಳ್ಳೆ ಹೆಂಡ್ತಿಯಾಗ್ತಾಳಂತೆ ಪಿಗ್ಗಿ!

ಪ್ರಿಯಾಂಕಾ ಚೋಪ್ರಾ ಎಂದರೆ ಉತ್ತಮ ನಟಿ, ನೃತ್ಯಗಾತಿ, ಹಾಡುಗಾತಿ, ಸಾಧಕಿ ಹೀಗೆ ಹತ್ತಾರು ಸಂಗತಿ ನೆನಪಿಗೆ ಬರುತ್ತವೆ. ಸಹ ನಟಿಯರೊಂದಿಗೆ ವೈಷಮ್ಯವಿಲ್ಲದ ಸ್ನೇಹ ಬಾಂಧವ್ಯ ಉಳಿಸಿಕೊಳ್ಳುವ ನಟಿ ಎಂದೂ ಪಿಗ್ಗಿ ಹೆಗ್ಗಳಿಕೆ ಹೊಂದಿದ್ದಾಳೆ. ಇಷ್ಟು ಮಾತ್ರವಲ್ಲ 'ನಾನು ಅದಕ್ಕೂ ಮೀರಿದ ಉತ್ತಮ ಹೆಂಡತಿಯೂ ಆಗುತ್ತೇನೆ' ಎಂದಿದ್ದಾಳೆ ಆಕೆ.

'ನನ್ನನ್ನು ನಾನು ಸ್ಟಾರ್ ಅಥವಾ ನಟಿ ಎಂದು ಪರಿಗಣಿಸುವುದಿಲ್ಲ. ನನ್ನ ಪ್ರಕಾರ ನಾನೊಬ್ಬ ಸಾಧಕಿ. ಸಾಧನೆ ಮಾಡುವುದೇ ನನ್ನ ಗುರಿ, ಬಹುಶಃ ಮುಂದೆ ನಾನು ಹೆಂಡತಿಯಾಗಿ ಸಾಧಕಿಯಾಗಬಲ್ಲೆ. ನಾನು ನನ್ನ ಗಂಡನಿಗೆ ಅತ್ಯುತ್ತಮ ಹೆಂಡತಿಯಾಗುತ್ತೇನೆ. ನನ್ನ ಹಾದಿಯಲ್ಲಿ ಬರುವುದೆಲ್ಲವೂ ಉತ್ತಮವಾಗಿರಬೇಕು ಎಂದು ಬಯಸುವವಳು ನಾನು' ಎಂದಿದ್ದಾಳೆ ಪ್ರಿಯಾಂಕಾ.

ಜನರು ಖುಷಿಯಿಂದ ಇರಬೇಕು. ಅದಕ್ಕೆ ನಿಮ್ಮ ಸಂಗಾತಿಯೊಂದಿಗೆ ಪ್ರೀತಿಯಿಂದ ಇರುವುದು ಅಗತ್ಯ. ಪ್ರೀತಿಯಿಂದ ಇಲ್ಲ ಎಂದಾದರೆ ಆ ಸಂಬಂಧ ಹೇಗೆ ತಾನೆ ಉಳಿದುಕೊಳ್ಳಲು ಸಾಧ್ಯ ಎನ್ನುವ ತರ್ಕ ಆಕೆಯದು. 'ನಾನು ಯಾವಾಗಲೇ ಮದುವೆಯಾಗಲಿ, ಜಗಳ ಆಡಿದ್ದಕ್ಕೆ ಕೈಹಿಡಿದಾತನನ್ನು ತೊರೆಯುವಂತಹ ಹುಡುಗಿಯರ ಪೈಕಿ ನಾನಲ್ಲ. ನನಗೆ ಅದರಲ್ಲಿ ನಂಬಿಕೆಯೂ ಇಲ್ಲ. ಪ್ರೀತಿ ಅಸಂಖ್ಯಾತ ಸಮಸ್ಯೆಗಳನ್ನು ತೊಡೆದುಹಾಕಬಲ್ಲದು. ಪ್ರೀತಿಯೊಂದಿದ್ದರೆ ಏನು ಬಂದರೂ ಎದುರಿಸಬಹುದು' ಎಂದು ಪ್ರೀತಿ, ಮದುವೆಯ ಕುರಿತ ತನ್ನ ನೋಟವನ್ನು ತೆರೆದಿಟ್ಟಿದ್ದಾಳೆ ಪಿಗ್ಗಿ. ಮದುವೆಯಾದ ಬಳಿಕ ಉಳಿದ ನಟಿಮಣಿಯರಂತೆ ವಿವಾದದ ಸಂಸಾರ ತನ್ನದಾಗುವುದಿಲ್ಲ. ಗಂಡನಿಗೆ ಒಳ್ಳೆಯ ಹೆಂಡತಿ ತಾನಾಗುತ್ತೇನೆ ಎಂದು ಪಿಗ್ಗಿ ಭರವಸೆ ನೀಡುವ ಮೂಲಕ ಪಡ್ಡೆ ಹೈಕಳಿಗೆ ಹಗಲಿನಲ್ಲಿಯೇ ನಕ್ಷತ್ರ ತೋರಿಸಿದ್ದಾಳೆ. ಇದನ್ನು ಕೇಳಿ ಆಕೆಯನ್ನು ವರಿಸಲು ನಿಲ್ಲುವವರ ಕ್ಯೂ ಇನ್ನಷ್ಟು ಉದ್ದವಾಗಬಹುದು!



# ಮತ್ತೆ ಬಂದಳು ಇಶಾ

ಬರೋಬ್ಬರಿ ನಾಲ್ಕು ವರ್ಷಗಳ ಬಳಿಕ ನಟಿ ಇಶಾ ಕೊಪ್ಪಿಕರ್ ಬಾಲಿವುಡ್ ಅಂಗಳದಲ್ಲಿ ಪ್ರತ್ಯಕ್ಷಳಾಗಿದ್ದಾಳೆ. ರಾಮ್‌ಗೋಪಾಲ್ ವರ್ಮಾ ನಿರ್ಮಾಣದ 'ಶಬ್ರಿ' ಬಳಿಕ ಇಶಾ ಮತ್ತೆ ಬಾಲಿವುಡ್ ಅಂಗಳದಲ್ಲಿ ಕಾಣಿಸಿಕೊಂಡಿರಲಿಲ್ಲ. 2009ರಲ್ಲಿ ಹೋಟೆಲ್ ಉದ್ಯಮಿ ತಿಮ್ಮಿ ನಾರಂಗ್ ಅವರನ್ನು ಮದುವೆಯಾದ ಬಳಿಕ ಇಶಾ ಅಷ್ಟಾಗಿ ಸಿನಿಮಾಗಳಲ್ಲಿ ನಟಿಸಿರಲಿಲ್ಲ. ಈ ನಡುವೆ ಮರಾಠಿ ಚಿತ್ರರಂಗಕ್ಕೂ ಪಾದಾರ್ಪಣೆ ಮಾಡಿದ್ದಳು. ಕಳೆದ ವರ್ಷವಷ್ಟೇ ಹೆಣ್ಣುಮಗುವಿಗೆ ಜನ್ಮ ನೀಡಿದ್ದ ಇಶಾ ಹೊಸ ಇನಿಂಗ್ಸ್ ಪ್ರಾರಂಭಿಸುವ ಉತ್ಸಾಹದಲ್ಲಿದ್ದಾಳೆ.

'ಅಸ್ಸಿ ನಬ್ಬೆ ಪೂರೆ ಸೌ' ಚಿತ್ರದಲ್ಲಿ ಇಶಾ ಬಣ್ಣಹಚ್ಚುತ್ತಿದ್ದಾಳೆ. ನಾಲ್ಕು ವರ್ಷದ ನಂತರ ಬಾಲಿವುಡ್‌ಗೆ ಕರೆತಂದಿರುವುದು ಈ ಚಿತ್ರದ ಕಥೆ ಎಂದಿದ್ದಾಳೆ ಆಕೆ. ಕಳೆದ ಒಂದೂವರೆ ವರ್ಷದಲ್ಲಿ ಬಂದ ಅನೇಕ ಕಥೆಗಳಲ್ಲಿ ಒಂದಲ್ಲ ಒಂದು ಸಮಸ್ಯೆಗಳಿದ್ದವು. ಅವುಗಳನ್ನು ಪರಿಗಣಿಸಲು ಸಾಧ್ಯವೇ ಇರಲಿಲ್ಲ. ಆದರೆ ಈ ಕಥೆಯಲ್ಲಿ ಅಂತಹ ಯಾವ ಸಮಸ್ಯೆಯೂ ಕಾಣಲಿಲ್ಲ ಎಂದಿದ್ದಾಳೆ ಇಶಾ. ಈ ಚಿತ್ರದಲ್ಲಿ 30ರಿಂದ 80 ವರ್ಷದವರೆಗಿನ ಮಹಿಳೆಯ ಬದುಕಿನ ಪಯಣದ ಪಾತ್ರವನ್ನು ಆಕೆ ಪೋಷಿಸಲಿದ್ದಾಳೆ.

ಸಾಂಸಾರಿಕ ಜೀವನವನ್ನು ಇಷ್ಟಪಡುತ್ತಲೇ, ಇಶಾ ಈಗ ಮತ್ತೆ ಸಿನಿಮಾರಂಗದಲ್ಲಿ ಸಂಪೂರ್ಣ ವಿಹರಿಸಲು ತೀರ್ಮಾನಿಸಿದ್ದಾಳೆ. ಸಲಿಂಗಕಾಮಿಗಳ ಕಥೆಯುಳ್ಳ 'ಗರ್ಲ್‌ಫ್ರೆಂಡ್' ಚಿತ್ರದಲ್ಲಿ ಹಸಿಬಿಸಿಯಾಗಿ ಕಾಣಿಸಿಕೊಂಡು ವಿವಾದ ಸೃಷ್ಟಿಸಿದ್ದ ಆಕೆ ಅದಕ್ಕೆ ತದ್ವಿರುದ್ಧವಾದ ಮೌಲ್ಯಯುತ ಸಿನಿಮಾಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳಲು ಬಯಸಿದ್ದಾಳೆ. 'ಕಿರಣ್ ಬೇಡಿ ಅಥವಾ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಜೀವನ ಚರಿತ್ರೆಗಳ ಸಿನಿಮಾ ರೂಪಾಂತರದಲ್ಲಿ ನನ್ನನ್ನು ತೊಡಗಿಸಿಕೊಳ್ಳಲು ಇಷ್ಟಪಡುತ್ತೇನೆ' ಎಂದು ಇಶಾ ಹೇಳಿಕೊಂಡಿದ್ದಾಳೆ. ನಟನೆ ಮಾತ್ರವಲ್ಲ, ಈಗ ನಿರ್ಮಾಣದತ್ತಲೂ ಇಶಾ ಕಣ್ಣುಹಾಕಿದ್ದಾಳೆ. 'ಕಥೆಗಳನ್ನು ಓದುತ್ತಿದ್ದೇನೆ. ಒಳ್ಳೆಯ ವಸ್ತುವಿನೊಂದಿಗೆ ಶೀಘ್ರದಲ್ಲಿಯೇ ನಿರ್ಮಾಪಕಿಯಾಗಿ ಬರಲಿದ್ದೇನೆ' ಎಂದಿದ್ದಾಳೆ ಇಶಾ.

■ ಅಮಿ